**ಸಾಕ್ಷಿಗೆ ದಿನಾಂಕಃ20-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ.V.R.N ವಕೀಲರಿಂದ ::**

1. ವಾದಿ ನನ್ನ ತಂಗಿ. 1 ಮತ್ತು 2 ನೇ ಪ್ರತಿವಾದಿಗಳು ವಾದಿಯ ಅಕ್ಕ ಶೇಷಮ್ಮ ರವರ ಮಕ್ಕಳು ಎಂದರೆ ಸರಿ. ಶೇಷಮ್ಮ ನನ್ನ ಅಕ್ಕ. 3 ನೇ, 4 ನೇ, 7 ನೇ ಮತ್ತು 8 ನೇ ಪ್ರತಿವಾದಿಗಳು ವಾದಿಯ ಅಕ್ಕಂದಿರು ಎಂದರೆ ಸರಿ. ವೆಂಕಟೇಶ್ ಭಟ್ ವಾದಿಯ ಅಣ್ಣ ಎಂದರೆ ಸರಿ. ಕುಮಾರ ಸ್ವಾಮಿ ವಾದಿಯ ತಮ್ಮ ಎಂದರೆ ಸರಿ. 12 ಮತ್ತು 13 ನೇ ಪ್ರತಿವಾದಿಗಳು ವೆಂಕಟೇಶ್ ಭಟ್ ಮತ್ತು ಕುಮಾರ ಸ್ವಾಮಿ ರವರುಗಳಿಂದ ದಾವಾ ಸ್ವತ್ತು ಸಂಖ್ಯೆ 9 ಅನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಕ್ರಯದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ಸದರಿ ದಾವಾ ಸ್ವತ್ತು ಸಂಖ್ಯೆ 9 ನೇ ಆಸ್ತಿಯು ದಿಃ21-04-1980 ರ ವಿಭಾಗ ಪತ್ರದಂತೆ ನಮ್ಮ ತಾಯಿ ಶಾಂತಲಕ್ಷ್ಮಮ್ಮ ರವರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು 5 ನೇ ಪ್ರತಿವಾದಿ ಹಾಗೂ 9 ನೇ ಪ್ರತಿವಾದಿಯ ಗಂಡ ಮತ್ತು ಅವರ ಮಕ್ಕಳು ದಿಃ24-02-1994 ರಂದು ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತನ್ನು ಕ್ರಯ ಪತ್ರ ಮಾಡಿಕೊಡಲು 5 ನೇ ಪ್ರತಿವಾದಿ ಹಾಗೂ 9 ನೇ ಪ್ರತಿವಾದಿಯ ಗಂಡ ಮತ್ತು ಅವರ ಮಕ್ಕಳಿಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರಲಿಲ್ಲ ಎಂದರೆ ಸರಿ. ಪ್ರಸ್ತುತ ಸದರಿ ಆಸ್ತಿಯ ಖಾತೆ ಮತ್ತು ಪಹಣಿ 13 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಸ್ವತ್ತಿನ ಮೇಲೆ ನಮಗೂ ಸಹ ಭಾಗಾಂಶ ಇದೆ ಎಂದರೆ ಸರಿ.

3. ದಿಃ21-04-1980 ರಂದು ನಮ್ಮ ಕುಟುಂಬದಲ್ಲಿ ಮಾಡಿಕೊಂಡ ವಿಭಾಗ ಪತ್ರಕ್ಕೆ ನಮ್ಮ ಕುಟುಂಬದ ಹೆಣ್ಣು ಮಕ್ಕಳು ಪಕ್ಷಕಾರರಾಗಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು, ಆ ಸಂದರ್ಭದಲ್ಲಿ ನಮ್ಮ ತಾಯಿಯ ಅವರ ಹಿಸ್ಸೆಗೆ ಬರುವ ಭಾಗಾಂಶವನ್ನು ಹೆಣ್ಣುಮಕ್ಕಳಿಗೆ ನೀಡುವುದಾಗಿ ನಮಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ವಿಭಾಗ ಪತ್ರದಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ಸದರಿ ಭಾಗಾಂಶವನ್ನು ನಮ್ಮ ತಾಯಿಯವರು ಹೆಣ್ಣುಮಕ್ಕಳಿಗೆ ಅರಿಶಿಣ ಕುಂಕುಮ ನೀಡುವ ಉದ್ದೇಶದಿಂದ ಇಟ್ಟುಕೊಂಡಿರುವುದಾಗಿ ನುಡಿಯುತ್ತಾರೆ.

ಸದರಿ ವಿಚಾರವನ್ನು ವಿಭಾಗ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ನಮ್ಮ ತಾಯಿ ಮೌಖಿಖವಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲಿ ವಾದಿಗೆ ಮದುವೆಯಾಗಿರಲಿಲ್ಲ ಎಂದರೆ ಸರಿ ಮತ್ತು ಆ ಸಂದರ್ಭದಲ್ಲಿ ವಾದಿಯು ವಯಸ್ಕರಾಗಿದ್ದರು ಎಂದರೆ ಸರಿ.

4. ದಾವಾ ಆಸ್ತಿಗಳು ನಮ್ಮ ತಂದೆ ಶ್ರೀನಿವಾಸ್ ಭಟ್ ರವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ನಮ್ಮ ತಂದೆ ಶ್ರೀನಿವಾಸ್ ಭಟ್ ರವರು ದಿಃ09-03-1974 ರಂದು ಮರಣ ಹೊಂದಿದರು ಎಂದರೆ ಸರಿ. ನಮ್ಮ ತಂದೆಯ ಮರಣಾನಂತರ ನನ್ನ ತಾಯಿ ಶಾಂತಲಕ್ಷ್ಮಮ್ಮ ರವರು ಮನೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಮ್ಮ ತಾಯಿಯವರ ಗಮನಕ್ಕೆ ಬಾರದಂತೆ ಅವರನ್ನು ಉಪನೊಂದಾಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿ ಸದರಿ ವಿಭಾಗ ಪತ್ರವನ್ನು ನೊಂದಣಿ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಸದರಿ ವಿಭಾಗ ಪತ್ರದ ಮಾಹಿತಿ 2017 ನೇ ಇಸವಿವರೆವಿಗೂ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಷೆಡ್ಯೂಲ್ ಆಸ್ತಿಗಳಲ್ಲಿ 1/9 ನೇ ಭಾಗಾಂಶ ಇದೆ ಎಂದರೆ ಸರಿಯಲ್ಲ.

5. ವಾದಿ ಸದರಿ ವಿಭಾಗ ಪತ್ರಕ್ಕೆ ಅಗತ್ಯ ಪಕ್ಷಕಾರರು ಆಗಿದ್ದರು ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರ ಕಾನೂನು ಬದ್ಧವಾಗಿರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ವಾದಿಗೆ ಯಾವುದೇ ಭಾಗಾಂಶವಾಗಲೀ ಅಥವಾ ಪ್ರತಿಫಲವಾಗಲೀ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಆ ಸಂದರ್ಭದಲ್ಲಿ ಅವರು ಅಗತ್ಯ ಪಕ್ಷಕಾರರು ಆಗಿರಲಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಭಾಗಾಂಶವನ್ನು ತಪ್ಪಿಸುವ ಉದ್ದೇಶದಿಂದ ನಾವುಗಳು ಒಟ್ಟು ಕುಟುಂಬದ ಆಸ್ತಿಯನ್ನು ತದನಂತರ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

6. 2017 ನೇ ಇಸವಿಯಲ್ಲಿ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಭಾಗಾಂಶ ಬೇಕೆಂದು ವಾದಿಯು ತನ್ನ ಎಲ್ಲಾ ಸಹೋದರರನ್ನು ಕೇಳಿದ್ದರು ಎಂದರೆ ಸರಿಯಲ್ಲ. ವಾದಿ, 1 ಮತ್ತು 2 ನೇ ಪ್ರತಿವಾದಿಗಳು, 3 ನೇ ಪ್ರತಿವಾದಿ, 4 ನೇ ಪ್ರತಿವಾದಿ ಮತ್ತು 8 ನೇ ಪ್ರತಿವಾದಿಗಳಿಗೆ ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಯಾವುದೇ ಉಯಿಲು ಪತ್ರವನ್ನು ಬರೆದಿರುವುದಿಲ್ಲ ಎಂದರೆ ಸರಿ. ಸದರಿ ವಿಭಾಗ ಪತ್ರದ ಪ್ರಕಾರ ದಾವಾ ಶೆಡ್ಯೂಲ್ ಸಂಖ್ಯೆ 6, 7 ಮತ್ತು 10 ನನಗೆ ಲಭಿಸಿರುತ್ತದೆ ಎಂದರೆ ಸರಿ.

7. ನನ್ನ ಭಾಗಾಂಶಕ್ಕೆ ಲಭಿಸಿದ ದಾವಾ ಆಸ್ತಿ ಸಂಖ್ಯೆ 10 ನ್ನು 15 ನೇ ಪ್ರತಿವಾದಿಯ ಹೆಸರಿಗೆ 1988 ನೇ ಇಸವಿಯಲ್ಲಿ ವಾದಿಗೆ ತನ್ನ ಭಾಗಾಂಶವನ್ನು ತಪ್ಪಿಸುವ ದುರುದ್ದೇಶದಿಂದ ಕ್ರಯ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರ ವಾದಿಗೆ 2017 ನೇ ಇಸವಿವರೆವಿಗೂ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಐಟಮ್ ನಂ.5, 6 ಮತ್ತು 10 ರಲ್ಲಿ ವಾದಿಗೆ ಸಮಾನ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಆಸ್ತಿ ಸಂಖ್ಯೆ 1 ಇಂದಿಗೂ ಸಹ ತಾಯಿಯವರ ಹೆಸರಿನಲ್ಲಿದೆ ಎಂದರೆ ಸರಿ.

8. ದಾವಾ ಐಟಮ್ ನಂ.3 ನ್ನು ನನ್ನ ಸಹೋದರ ದಿವಂಗತ ಕುಮಾರ ಸ್ವಾಮಿ ಮತ್ತು ಅವರ ಮಕ್ಕಳು 14 ನೇ ಪ್ರತಿವಾದಿಗೆ 1988 ರಲ್ಲಿ ಕ್ರಯ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರ ವಾದಿ ಮತ್ತು ಉಳಿದ ಅವರ ಸಹೋದರಿಯರಿಗೆ ಅನ್ವಯಿಸುವುದಿಲ್ಲ ಮತ್ತು ಸದರಿ ವಿಭಾಗ ಪತ್ರಕ್ಕೆ ಅವರು ಬಾದ್ಯಸ್ಥಿಕೆ ಹೊಂದುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ನನಗಾಗಲೀ ನನ್ನ ಸಹೋದರರಿಗಾಗಲೀ ಅವುಗಳನ್ನು ಮಾರಾಟ ಮಾಡಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ ಈ ವರೆವಿಗೂ ಗಳಿಸಿರುವ ಆದಾಯದ ಭಾಗಾಂಶವನ್ನು ವಾದಿಗೆ ಕೊಡಲು ನಾವು ಬಾದ್ಯಸ್ಥರಾಗಿರುತ್ತೇವೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ:

ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ

ಶೃಂಗೇರಿ.